ಕರ್ನಾಟಕ ವಿಧಾನಸಭೆ

ಸೋಮವಾರ 5ನೇ ಜುಲೈ 1999ರಂದು ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 11-20 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ರಮೇಶ್ ಕುಮಾರ್‌ರವರು) ಪೀಠವನ್ನು ಅಲಂಕರಿಸಿದ್ದರು.

1) ಸಂತಾಪ ಸೂಚನೆಗಳು

ಮಾನ್ಯ ಸಭಾಧ್ಯಕ್ಷರು :— ವಿಧಾನಸಭೆಯ ಮಾಜಿ ಸದಸ್ಯರುಗಳಾಗಿದ್ದ ಶ್ರೀಯುತರುಗಳಾದ ಕಾಂತರಾವ್ ಭೀಮರಾವ್ ದೇಸಾಯಿ, ಶ್ರೀ ಕುಷ್ಟಗಿ ಹಾಗೂ ಶ್ರೀ ಬಿ. ಶಿವಣ್ಣ ವಾರದ, ದೇವದುರ್ಗ ಇವರುಗಳು ನಿಧನಹೊಂದಿರುವರೆಂದು ಈ ಸದನಕ್ಕೆ ನಾನು ಅತ್ಯಂತ ವಿಷಾದದಿಂದ ತಿಳಿಸುತ್ತಿದ್ದೇನೆ.

1. ಶ್ರೀ ಕಾಂತರಾವ್ ಭೀಮರಾವ್ ದೇಸಾಯಿ

ನವಲಗುಂದದಲ್ಲಿ 1912ನೇ ಇಸವಿಯಲ್ಲಿ ಜನಿಸಿದ ಶ್ರೀ ಕೆ.ಬಿ. ದೇಸಾಯಿಯವರು ಮುಂದೆ ಕಾನೂನು ಪದವಿ ಪಡೆದು ರಾಯಚೂರು ಜಿಲ್ಲೆಯ ಸಹಕಾರ ಕ್ಷೇತ್ರಗಳಲ್ಲಿ ಉತ್ತಮ ಕಾರ್ಯ ನಿರ್ವಹಿಸಿ ಅನುಭವಿ ರಾಜಕಾರಣಿಯೆನಿಸಿದ್ದರು. ನಂತರ ಅವರು ರಾಜ್ಯ ಮಟ್ಟದ ರಾಜಕಾರಣಕ್ಕೆ ಧುಮುಕಿ ಕುಷ್ಟಗಿ ಕ್ಷೇತ್ರದಿಂದ 1962-67ಮತ್ತು 1972-77ರ ಎರಡು ಅವಧಿಗೆ ವಿಧಾನಸಭೆಗೆ ಆಯ್ಕೆಯಾಗಿ ಉತ್ತಮ ಜನಸೇವೆ ಮಾಡಿದ ಕೀರ್ತಿಗೆ ಪಾತ್ರರಾಗಿದ್ದರು.

ಶ್ರೀಯುತರು ದಿನಾಂಕ : 5.3.99 ರಂದು ನಿಧನರಾಗಿರುತ್ತಾರೆ.

2. ಶ್ರೀ ಬಿ. ಶಿವಣ್ಣ ವಾರದ

ಶ್ರೀ ಬಿ. ಶಿವಣ್ಣ ವಾರದ ಇವರು 1930ರಲ್ಲಿ ಗುಲ್ಬರ್ಗ ಜಿಲ್ಲೆಯ ಸೈದಾಪುರದಲ್ಲಿ ಜನಿಸಿ, ರಾಯಚೂರಿನಲ್ಲಿ ಹೈಸ್ಕೂಲ್‌ವರೆಗೆ ಶಿಕ್ಷಣ ಪಡೆದು, ಹಿಂದುಳಿದ ವರ್ಗದವರ ಏಳಿಗೆಗಾಗಿ ಶ್ರಮಿಸಲು ರಾಜಕೀಯಕ್ಕೆ ಇಳಿದು ಈ ಸಮಾಜಕ್ಕಾಗಿ ದುಡಿದ ಗಣ್ಯ ನಾಯಕರಲ್ಲೊಬ್ಬರಾಗಿದ್ದರು. ಶ್ರೀಯುತರು ಎರಡನೇ ಸಾರ್ವತ್ರಿಕ ಚುನಾವಣೆಯಲ್ಲಿ ಅಂದರೆ 1957-62ರ ಅವಧಿಯಲ್ಲಿ ದೇವದುರ್ಗ ಕ್ಷೇತ್ರದಿಂದ ವಿಧಾನಸಭೆಗೆ ಆಯ್ಕೆಯಾಗಿದ್ದರು. ದಿನಾಂಕ 8-1-99 ರಂದು ಸ್ವಗ್ರಾಮವಾದ ಸೈದಾಪುರದಲ್ಲಿ ನಿಧನಹೊಂದಿರುತ್ತಾರೆ.

ಮೃತರ ಗೌರವಾರ್ಥ ಮಾನ್ಯ ಸದಸ್ಯರುಗಳೆಲ್ಲರೂ ಎದ್ದು ನಿಂತು ಒಂದು ನಿಮಿಷ ಮೌನವನ್ನು ಆಚರಿಸಬೇಕೆಂದು ಕೋರುತ್ತೇನೆ.

ಈ ಸಭೆಯು ಅಂಗೀಕರಿಸಿದ ಸಂತಾಪ ಸೂಚನಾ ನಿರ್ಣಯದ ಪ್ರತಿಯನ್ನು ಮೃತರ ಕುಟುಂಬಕ್ಕೆ ಕಳಿಸಿಕೊಡಲಾಗುವುದು.

(2) ಪ್ರಶ್ನೋತ್ತರಗಳು

ಅ) ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು.

ಯೂನಿಫಾರಂ ಪೋರ್ಟ್ ಪಾಲಿಸಿ.

341(2331) ಡಾ: ಎಂ.ಪಿ. ಕರ್ಕಿ (ಕುಮಟಾ) :— ಮಾನ್ಯ ಬಂದರು ಮತ್ತು ಮೀನುಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಿ.ಆರ್.ಜಡ್. ಅಸ್ತಿತ್ವಕ್ಕೆ ಬಂದದ್ದು ಯಾವಾಗ;

ಆ) ಅದನ್ನು ಅನುಷ್ಠಾನಕ್ಕೆ ತರಲು ರಾಜ್ಯದಲ್ಲಿ ಕಮಿಟಿ ರಚಿಸಲಾಗಿದೆಯೇ?

ಇ) ಯೂನಿಫೊರ್ಮ ಪೋರ್ಟ್ ಪಾಲಿಸಿ ಮಾಡಲು ಎಂದು ನಿಶ್ಚಯಿಸಲಾಯಿತು;

ಈ) ಈ ಪಾಲಿಸಿ ಎಂದು ಅಸ್ತಿತ್ವಕ್ಕೆ ಬಂದಿದೆಯೇ ಅಥವಾ ಇಲ್ಲದಿದ್ದಲ್ಲಿ ಯಾವಾಗ ಬರಲಿದೆ;

ಉ) ಇಲಾಖೆಯ ವಿಳಂಬದಿಂದಾಗಿ ಅನೇಕ ಯೋಜನೆಗಳ ಅನುಷ್ಠಾನಕ್ಕೆ ತೊಂದರೆಯಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ (ಬಂದರು ಮತ್ತು ಮೀನುಗಾರಿಕೆ ರಾಜ್ಯ ಸಚಿವರು) :—

ಅ) ದಿನಾಂಕ: 19-2-1991 ರಂದು ಸಿ.ಆರ್.ಜಡ್ ಅಸ್ತಿತ್ವಕ್ಕೆ ಬಂದಿದೆ.

ಆ) ಹೌದು, ಅರಣ್ಯ ಪರಿಸರ ಮತ್ತು ಜೀವಶಾಸ್ತ್ರ ಇಲಾಖೆಯ ವತಿಯಿಂದ ಸಮಿತಿಯನ್ನು ರಚಿಸಲಾಗಿದೆ.

ಇ) ರಾಜ್ಯ ಸರ್ಕಾರ 12-2-1997 ರಂದು ಬಂದರು ನೀತಿಯನ್ನು ರೂಪಿಸಿದೆ.

ಈ) ಬಂದರು ನೀತಿ ಹೊರಡಿಸಿದ ದಿನಾಂಕ 12-2-97 ರಿಂದಲೇ ಅಸ್ತಿತ್ವಕ್ಕೆ ಬಂದಿದೆ.

ಉ) ಇಲ್ಲ. ಇಲಾಖೆಯಿಂದ ಯೋಜನೆಗಳ ಅನುಷ್ಠಾನದಲ್ಲಿ ಯಾವ ವಿಳಂಬವೂ ಆಗುವುದಿಲ್ಲ.